ದಿನಾಂಕ : 19 ನೇ ನವೆಂಬರ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಯರ ಪರ ಶ್ರೀ ಎಂ ಹೆಚ್ ಎನ್ ವಕೀಲರಿಂದ.

ನಾನು ಕಾವೇರಿ ಗ್ರಾಮೀಣ ಬ್ಯಾಂಕ್ ನ ಸಿಬ್ಬಂದಿ ಅಲ್ಲ ಎಂದರೆ ಸರಿಯಲ್ಲ. ಈಗ ಸದರಿ ಬ್ಯಾಂಕ್ ಕರ್ನಾಟಕ ಗ್ರಾಮೀಣ ಬ್ಯಾಂಕ್ ಎಂದುಮರು ನಾಮಕರಣಗೊಂಡಿದೆ ಎನ್ನುತ್ತಾರೆ. ನಮ್ಮ ಬ್ಯಾಂಕ್ ನಿಂದ ಅಪ್ಪಯ್ಯ ಎಂಬುವವರಿಗೆ ಸಾಲ ನೀಡಲಾಗಿತ್ತು ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರಿಗೆ ನಾವು ಸಾಲ ನೀಡಿಲ್ಲ ಎಂದರೆ ಸರಿ. ಪ್ರತಿವಾದಿ 1 ರಿಂದ 3 ಅಪ್ಪಯ್ಯನವರ ವಾರಸುದಾರರಾಗಿದ್ದಾರೆ ಎನ್ನುತ್ತಾರೆ. ದಿನಾಂಕ 28.05.2016 ರಲ್ಲಿ  ಅಪ್ಪಯ್ಯ ಮೃತರಾಗಿದ್ದಾರೆ ಎಂದರೆ ಸರಿ. ದಿನಾಂಕ 15.05.2012 ರಲ್ಲಿ ಅಪ್ಪಯ್ಯ ಸಾಲ ಪಡೆದಿದ್ದರು. ಸಾಲ ನೀಡುವಾಗ ಪ್ರನೋಟ್, ಸಾಲದ ಅರ್ಜಿ, ಗ್ಯಾರಂಟರ್ ಸಹಿ ಸಹ ಪಡೆಯುತ್ತೇವೆ ಎನ್ನುತ್ತಾರೆ. ವ್ಯಾಪಾರ ಸಾಲ ಆದ ಕಾರಣ ವ್ಯಾಪಾರದ ಪರವಾನಿಗೆಯನ್ನು ಮಾತ್ರ ಪಡೆಯುತ್ತೇವೆ.  ಅಪ್ಪಯ್ಯ ಟಿಂಬರ್ ವ್ಯಾಪಾರ ಮಾಡುತ್ತಿದ್ದರು. ನಾವು ಟಿಂಬರ್ ವ್ಯಾಪಾರಸ್ಥರಿಗೂ ಸಹ ಸಾಲ ನೀಡುತ್ತೇವೆ. ಅಪ್ಪಯ್ಯನವರಿಂದ ಟಿಂಬರ್ ವ್ಯಾಪಾರದ ಪರವಾನಿಗೆಯನ್ನು ಪಡೆದಿದ್ದೆವು.

ಒಂದು ವರ್ಷದ ಒಳಗಡೆ ಸಾಲ ಮರುಪಾವತಿಸಬೇಕೆಂಬ ನಿಯಮ ಇರುತ್ತದೆ. ನಾವು ಒಂದು ವರ್ಷದ ನಂತರ ಅಪ್ಪಯ್ಯನವರಿಗೆ ನೊಟೀಸ್ ನೀಡಿರುತ್ತೇವೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ಖುದ್ದಾಗಿ ಸಹ ಭೇಟಿಯಾಗಿ ಸಾಲದ ಬಗ್ಗೆ ವಿಚಾರಿಸಿರುತ್ತೇವೆ. ನ್ಯಾಯಾಲಯದ ಕಡತದಲ್ಲಿ ಸದರಿ ನೊಟೀಸ್ ಇಲ್ಲ ಎಂದರೆ ಸರಿ. ಕೆಲವು ಬಾರಿ ದೂರವಾಣಿ ಕರೆ ಮುಖಾಂತರ ಸಂಪರ್ಕಿಸಿರುತ್ತೇವೆ ಆದ ಕಾರಣ ನೊಟೀಸ್ ನೀಡದೇ ಇರಬಹುದು ಎನ್ನುತ್ತಾರೆ. ನಮ್ಮ ಬ್ಯಾಂಕ್ ನಿಂದ ಅಪ್ಪಯ್ಯವರಿಗೆ ಸಾಲ ನೀಡದೆ ಇರುವುದರಿಂದ ಸಾಲ ವಸೂಲಾತಿಗೆ ನಾವು ಅರ್ಹರಲ್ಲ ಎಂದರೆ ಸರಿಯಲ್ಲ. ಕಾವೇರಿ ಗ್ರಾಮೀಣ ಬ್ಯಾಂಕ್ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೊಂದಿಗೆ ಮರ್ಜ್ ಆಗಿದೆ ಎಂದು ಮತ್ತು ಆ ಕಾರಣವಾಗಿ ನಾವು ಸಾಲ ವಸೂಲಾತಿ ಮಾಡಬಹುದು ಎಂದು ಪ್ರತಿವಾದಿಯರಿಗೆ ನೊಟೀಸ್ ನೀಡಿಲ್ಲ ಎಂದರೆ ಸರಿ. ಅಪ್ಪಯ್ಯ ಮೃತರಾಗುವ ಮೊದಲು ಮೂರು ವರ್ಷದ ಒಳಗಡೆ ನಾವು ಅವರಿಂದ ಎ ಒ ಡಿ ಸಹಿ ಪಡೆದಿರುತ್ತೇವೆ.ನಿಪಿ 20 ಅನ್ನು ತೋರಿಸಿ ಅದಕ್ಕೆ ಅಪ್ಪಯ್ಯ ದಿನಾಂಕ 17.01.2015 ರಂದು ಸಹಿ ಮಾಡಿದ್ದಾರೆ ಎನ್ನುತ್ತಾರೆ.

ನಿಪಿ 14 ಕ್ಕೂ 20.01.2015 ರಂದು ಅಪ್ಪಯ್ಯನವರ ಸಹಿ ಪಡೆದಿದ್ದೇವೆ ಎಂದರೆ ಸರಿ. ನಾನು ಹೇಳಿದಂತೆ ನಿಪಿ 14 ಮತ್ತು 20 ರಲ್ಲಿರುವ ಸಹಿಗಳು ಅಪ್ಪಯ್ಯನವರದ್ದಲ್ಲ ಎಂದರೆ ಸರಿಯಲ್ಲ. ಅಪ್ಪಯ್ಯನವರ ಸಹಿಯನ್ನು ಎ ಒ ಡಿ ಗೆ ಮೂರು ವರ್ಷದ ಒಳಗಡೆ ಪಡೆಯದ ಕಾರಣ ನಾವು ಸಾಲ ವಸೂಲಾತಿಗೆ ಬಾಧ್ಯರಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ 1 ರಿಂದ 3 ಸಹ ಯಾವುದೇ ಹಣವನ್ನು ವಾಪಸ್ ಮಾಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ.